# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಆರೋಗ್ಯ ಇಲಾಖೆಯಲ್ಲಿ ಸಂಬಂಧಿಸಿದಂತೆ ಅನುಸರಿಸುವ ಕ್ರಮಗಳು ಈ ಕೆಳಕಂಡಂತಿರುತ್ತದೆ.

## *STANDARD PROCEDURE*

- ಪಾಲಿಕೆಯ ನಗರ ಯೋಜನಾ ವಿಭಾಗದಲ್ಲಿ ಕೇಂದ್ರ ಕಛೇರಿ ಮತ್ತು ವಲಯ ಕಛೇರಿಗಳಾದ,ಪೂರ್ವ/ಪಶ್ಚಿಮ/ದಕ್ಷಿಣ/ಮಹದೇವಪುರ/ಯಲಹಂಕ/ದಾಸರಹಳ್ಳಿ/ ರಾಜರಾಜೇಶ್ವರಿನಗರ/ಬೊಮ್ಮನಹಳ್ಳಿ ಕಛೇರಿಗಳನೊಳಗೊಂಡಿರುತ್ತದೆ.

- ಪಾಲಿಕೆಯ ಆರೋಗ್ಯ ಇಲಾಖೆಯಿಂದ ಸಾರ್ವಜನಿಕರಿಗೆ ಈ ಕೆಳಕಂಡ ಆರೋಗ್ಯ ಸೇವೆಗಳನ್ನು, ಪಾಲಿಕೆಯ 6 ರೆಫರಲ್ ಆಸ್ಪತ್ರೆ 24 ಹೆರಿಗೆ ಆಸ್ಪತ್ರೆ, 17 ಔಷಧಾಲಯ, 29 ಆರೋಗ್ಯ ಕೇಂದ್ರಗಳು ಮತ್ತು 19 ನಗರ ಕುಟುಂಬ ಕಲ್ಯಾಣ ಕೇಂದ್ರಗಳ ಮೂಲಕ ನೀಡಲಾಗುತ್ತದೆ.

### ತಾಯಿ ಮತ್ತು ಮಕ್ಕಳ ಆರೋಗ್ಯ :-

- ಈ ಕಾರ್ಯಕ್ರಮದ ಅಡಿಯಲ್ಲಿ ಹೆರಿಗೆ ಸೌಲಭ್ಯ, ಬಾಣಂತಿಯರ ಸೇವೆ, ಗರ್ಭಿಣಿಯರ ಸೇವೆಯನ್ನು ಎಲ್ಲಾ ಪಾಲಿಕೆಯ ಹೆರಿಗೆ ಆಸ್ಪತ್ರೆಗಳಲ್ಲಿ ನೀಡಲಾಗುತ್ತದೆ. ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಡಿಯಲ್ಲಿ ಕೆಲಸ ನಿರ್ವಹಿಸುತ್ತ ಈ ಯೋಜನೆಯಲ್ಲಿ ಉಚಿತ ಮಡಿಲುಕಿಟ್, ಜನನಿ ಸುರಕ್ಷತಾ ಯೋಜನೆ, ಮತ್ತು ಪ್ರಸೂತಿ ಆರೈಕೆ, ಯೋಜನೆಗಳನ್ನು ಸಾರ್ವಜನಿಕರಿಗೆ ನೀಡಲಾಗಿರುತ್ತದೆ.

- ಸಂತಾನಹರಣ ಶಸ್ತ್ರ ಚಿಕಿತ್ಸೆ ಸೌಲಭ್ಯ ಮತ್ತು ಮಕ್ಕಳಿಗೆ ಲಸಿಕಾ ಸೌಲಭ್ಯಗಳನ್ನು ನೀಡಲಾಗುತ್ತದೆ.

## ಹೊರ ರೋಗಿಗಳ ಸೇವೆಗಳು :-

- ಪಾಲಿಕೆಯ ರೆಫರಲ್ ಹಾಗೂ ಹೆರಿಗೆ ಆಸ್ಪತ್ರೆಗಳಿಗೆ ಗರ್ಭಿಣಿಯರು ಬಂದಾಗ ಮೊದಲು ಓ.ಪಿ.ಡಿ. ಯಲ್ಲಿ ಚೀಟಿ ಪಡೆದುಕೊಂಡು ನಂತರ ಕರ್ತವ್ಯನಿರತ ವೈದ್ಯಾಧಿಕಾರಿಗಳ ಬಳಿ ಹೋಗಿ ತೋರಿಸಿ (Prescription) ತೆಗೆದುಕೊಂಡು ನಂತರ ಶುಶ್ರೂಷಕಿರವರನ್ನು ಕಂಡು ಉಚಿತವಾಗಿ ಮಾತ್ರೆಗಳನ್ನು ಪಡೆಯುವುದು.
- ಸಂತಾನೋತ್ಪತ್ತಿ ಹಾಗೂ ಮಗುವಿನ ಆರೋಗ್ಯ ಕಾರ್ಯಕ್ರಮ ಗರ್ಭಿಣಿ ಆರೈಕೆ ಹಾಗೂ ಬಾಣಂತಿ ಆರೈಕೆ.
- ಕುಟುಂಬ ಕಲ್ಯಾಣ ಕಾರ್ಯಕ್ರಮ.
- ರಕ್ಷಣಾ ಚಿಕಿತ್ಸೆ (ಏಳು ಮಾರಕ ರೋಗಗಳನ್ನು ತಡೆಗಟ್ಟಲು ಲಸಿಕಾ ಕಾರ್ಯಕ್ರಮ)
- ಹೆಚ್.ಐ.ವಿ/ಏಡ್ಸ್ ಆಪ್ತ ಸಮಾಲೋಚನೆ ಹಾಗೂ ತಪಾಸಣೆ.
- ಪ್ರಯೋಗಶಾಲಾ ಸೌಲಭ್ಯಗಳು.
- ಕ್ಯಾನ್ಸರ್ ರೋಗಗಳ ಪರಿಶೀಲನೆ ಮತ್ತು ಪತ್ತೆ ಮಾಡುವುದು.
- ಜನನಾಂಗ ಮಾರ್ಗದ ಸೋಂಕು / ಲೈಂಗಿಕ ಸಂಪರ್ಕದ ಸೋಂಕುಗಳ ಬಗ್ಗೆ ರೋಗಿಗಳಿಗೆ ಅರಿವು ಮೂಡಿಸುವುದು ಹಾಗೂ ತಪಾಸಣೆ ಮತ್ತು ಚಿಕಿತ್ಸೆ.
- ಕ್ಷಯರೋಗ ತಪಾಸಣೆ ಮತ್ತು ಚಿಕಿತ್ಸೆ (ಡಾಟ್ಸ್)
- ಸಾಮಾನ್ಯ ಖಾಯಿಲೆಗಳಿಗೆ ಚಿಕಿತ್ಸೆ.
- ನಾಯಿ ಕಡಿತಕ್ಕೆ ಒಳಗಾದವರಿಗೆ ಚುಚ್ಚು ಮದ್ದು ನೀಡುವುದು.
- ಮಲೇರಿಯಾ ರಕ್ತ ಲೇಪನ ಸಂಗ್ರಹ ಮತ್ತು ಚಿಕಿತ್ಸೆ.
- ಸಾಂಕ್ರಾಮಿಕ ರೋಗ ನಿಯಂತ್ರಣಕ್ಕೆ ಸಹಾಯ ಮತ್ತು ಸೌಲಭ್ಯ
- ಶಾಲಾ ಆರೋಗ್ಯ ಕಾರ್ಯಕ್ರಮ.
- ಪಾಲಿಕೆಯ ಆರೋಗ್ಯ ಕೇಂದ್ರಗಳಲ್ಲಿ, ಔಷಧಾಲಯ, ನಗರ ಕುಟುಂಬ ಕಲ್ಯಾಣ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳು, ಕಿರಿಯ ಮಹಿಳಾ ಆರೋಗ್ಯ ಸಹಾಯಕಿ (ANM) ಮತ್ತು ಆರೋಗ್ಯ ಸಂಪರ್ಕ ಸೇವಾ ಕಾರ್ಯಕರ್ತೆಯರು (LINK WORKERS) ಕಾರ್ಯನಿರ್ವಹಿಸುತ್ತಿದ್ದು, ವಾರ್ಡ್ ಮಟ್ಟದಲ್ಲಿ ಎಲ್ಲಾ ರಾಷ್ಟ್ರೀಯ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲು ಕ್ರಮ ವಹಿಸಿರುತ್ತಾರೆ.
- ಇವರ ಮೇಲ್ವಿಚಾರಣೆ ಮತ್ತು ದೈನಂದಿನ ಆಡಳಿತ್ಮಾತಕ ಕೆಲಸ ಕಾರ್ಯಗಳನ್ನು ಆರೋಗ್ಯ ವೈದ್ಯಾಧಿಕಾರಿ (ತಾ.ಮ.ಕು.ಕ) ಯೋಜನಾ ಸಮನ್ವಾಯಾಧಿಕಾರಿ (ಆರ್.ಸಿ.ಹೆಚ್) ಮತ್ತು ವಲಯ ಮಟ್ಟದಲ್ಲಿ ಆರೋಗ್ಯ ವೈದ್ಯಾಧಿಕಾರಿ ಉಪಆರೋಗ್ಯ ವೈದ್ಯಾಧಿಕಾರಿಗಳು ಮತ್ತು ಆರೋಗ್ಯಾಧಿಕಾರಿಗಳು ಮೇಲ್ ಉಸ್ತುವಾರಿ ಮಾಡಲಾಗುವುದು.

## –: ಪಾಲಿಕೆಯ ವೈದ್ಯಕೀಯ ವಿಭಾಗದ ಅಡಿಯಲ್ಲಿ ಅನುಸರಿಸಿರುವ ವಿಧಾನಗಳು. :–

- ➢ ಪಾಲಿಕೆಯ ವೈದ್ಯಕೀಯ ವಿಭಾಗದಡಿಯಲ್ಲಿ 6 ರೆಫರಲ್ ಆಸ್ಪತ್ರೆ 24 ಹೆರಿಗೆ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿದ್ದು, ಎಲ್ಲಾ ಹೆರಿಗೆ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ.
- ➢ ಇವರ ಮೇಲ್ ಉಸ್ತುವಾರಿಯನ್ನು ಅಧೀಕ್ಷಕರು ಮತ್ತು ಆರೋಗ್ಯಾಧಿಕಾರಿ (ತಾ.ಮ.ಕು.ಕ) ರವರು ನಿರ್ವಹಿಸುತ್ತಿರುತ್ತಾರೆ.

### ನೋಡೆಲ್ ಅಧಿಕಾರಿ ಮ್ಯಾನೇಜ್ಡ್ ಹೆಲ್ತ್ ಕೇರ್

### ವೈದ್ಯಕೀಯ ಬಿಲ್ಲುಗಳನ್ನು ಸರಿಯಾದ ಕ್ರಮದಲ್ಲಿ ಸಲ್ಲಿಸುವ ಬಗ್ಗೆ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪಾಲಿಕೆಯ ಅಧಿಕಾರಿ / ನೌಕರರ ಆರೋಗ್ಯ ಸುಧಾರಣೆಗಾಗಿ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಈ ಚಿಕಿತ್ಸೆ ತಗುಲುವ ವೆಚ್ಚದ ಬಿಲ್ಲುಗಳನ್ನು ಸರಿಯಾದ ಕ್ರಮದಲ್ಲಿ ಕೆಳಕಂಡಂತೆ ಸಲ್ಲಿಸಲು ಈ ಮೂಲಕ ಆದೇಶಿಸಿದೆ.

- ◆ ಅಧಿಕಾರಿ/ನೌಕರರ ಹೆಲ್ತ್ ಕಾರ್ಡ್‌ನ್ನು ಸರಿಯಾಗಿ ಪರಿಶೀಲಿಸುವುದು. (ನವೀಕರಣ)
- ◆ ಅಧಿಕಾರಿ/ನೌಕರರ ಮಗ/ಮಗಳು 25 ವರ್ಷ ಮೇಲ್ಪಟ್ಟವರು ಚಿಕಿತ್ಸೆಗೆ ಅರ್ಹರಾಗಿರುವುದಿಲ್ಲ.
- ◆ ತಾವು ಸಲ್ಲಿಸುವ ವೈದ್ಯಕೀಯ ಬಿಲ್ಲುಗಳನ್ನು ಸರಿಯಾಗಿ ಪರಿಶೀಲಿಸಿ ಎಲ್ಲಾ ವರದಿಗಳೊಂದಿಗೆ ನೀಡುವುದು. (Form 1, Form C) ಕಡ್ಡಾಯ
- ◆ ಬಿಲ್ಲುಗಳ ಜೊತೆ ಆಸ್ಪತ್ರೆಯ ಔಷಧಿಗಳ ರಶೀದಿಯನ್ನು ಲಗತ್ತಿಸುವುದು.
- ◆ ಲ್ಯಾಬ್ ರಿಪೋರ್ಟ್ಸ್ ಇದ್ದಲ್ಲಿ ಕಡ್ಡಾಯವಾಗಿ ಲಗತ್ತಿಸುವುದು. ಇಲ್ಲವಾದಲ್ಲಿ ತಿರಸ್ಕರಿಸಲಾಗುವುದು.
- ◆ ರೂ. ಸಾವಿರಕ್ಕೂ ಮೇಲ್ಪಟ್ಟ ಬಿಲ್ಲುಗಳಿಗೆ ರಶೀದಿಗಳನ್ನು ಲಗತ್ತಿಸುವುದು.
- ◆ ರಕ್ತವನ್ನು ನೀಡಿದ್ದಲ್ಲಿ ಅದರ ರಸೀದಿಯನ್ನು ಲಗತ್ತಿಸುವುದು.

# Managed Health Care
# Instructions for out patient's Bills

1. Form -1

   Patient's Name whether out patient or In-patient & amount

2. Form – C

   1. Details of the employees
   2. Employee contact number & office contact number
   3. Employee signature.

3. Health card Xerox with EID No.

   1. Employee details
   2. Name list
   3. Health Card verified Xerox

4. Prescription slip must and should

5. Hospital seal & signature on the prescription & prescription bills.

6. Neatly maintain the bill with a file with these order

## <u>Instructions for In-patient Bills</u>

1. Form – 1

   Patient's Name whether out patient or In- patient & amount

2. Form – C

   1. Details of the employee's
   2. Employee contact number & office contact number
   3. Employee signature

3. Health card Xerox with EID No :

   1. Employee details
   2. Name list
   3. Health card verified Xerox

4. Prescription slip should & must

5. Hospital seal & Signature on prescription & prescription bills.

6. Approval letters.

7. Discharge Summary

8. Use codes for the bills

9. final bill with seal & Signature

10. Neatly maintain the bill with a file with these orders.

**ಪಾಲಿಕೆಯ ಹೆರಿಗೆ ಆಸ್ಪತ್ರೆಗಳಲ್ಲಿ ಈ ಕೆಳಕಂಡಂತೆ ಸೇವೆಗಳು ಸಾರ್ವಜನಿಕರಿಗೆ ನೀಡಲಾಗುವುದು.**

- ಪ್ರತಿ ಸೋಮವಾರ ಮತ್ತು ಶುಕ್ರವಾರದಂದು ಪಾಲಿಕೆಯ ಆಸ್ಪತ್ರೆಗಳಲ್ಲಿ ಗರ್ಭಿಣಿಯರಿಗೆ ಪರೀಕ್ಷೆ, ಲಸಿಕೆ, ನೀಡಲಾಗುವುದು ಹಾಗೂ ಉಚಿತ ಕಬ್ಬಿಣದ ಮಾತ್ರೆ ಮತ್ತು ಸಮಲೋಚನಾ ಸೌಲಭ್ಯಗಳನ್ನು ನೀಡಲಾಗುವುದು.
- ಉಚಿತ ಪ್ರಯೋಗಾಲಯ ಸೇವೆ, ಸ್ಕ್ಯಾನಿಂಗ್ ಸೌಲಭ್ಯ, ಸಣ್ಣ ಮತ್ತು ದೊಡ್ಡ ಶಸ್ತ್ರ ಚಿಕಿತ್ಸೆ ಸೌಲಭ್ಯ ಪಾಲಿಕೆಯ ಹೆರಿಗೆ ಆಸ್ಪತ್ರೆಗಳಲ್ಲಿ ನೀಡಲಾಗುವುದು.
- ಎಲ್ಲಾ ಹೆರಿಗೆ ಆಸ್ಪತ್ರೆಗಳಲ್ಲಿ ಸಾಮಾನ್ಯ ಹೆರಿಗೆಯ ಸೇವೆಗಳು.
- ಸಂತಾನಹರಣ ಶಸ್ತ್ರ ಚಿಕಿತ್ಸೆಗಳು ಟ್ಯುಬೆಕ್ಟಮಿ, ಉದರ ದರ್ಶಕ ನೋಸ್ಕಾಲ್‌ಪಲ್ ವ್ಯಾಸಕ್ಟಮಿ.
- ವೈದ್ಯಕೀಯ ಗರ್ಭಪಾತ.
- ಹೆರಿಗೆ ಸಮಯದಲ್ಲಿ ತಾಯಿಯಿಂದ ಮಗುವಿನ ಹರಡುವ ಹೆಚ್.ಐ.ವಿ. ರೋಗವನ್ನು ತಡೆಗಟ್ಟುವುದು.
- ಎನ್.ಎಸ್.ವಿ. ಮತ್ತು ಡಾಪ್ಲರ್ ಸೌಲಭ್ಯ.
- ಗಂಡಾಂತರ ಹೆರಿಗೆ ಸೌಲಭ್ಯ.
- ಸಿಜೇರಿಯನ್ ಹಾಗೂ ವಿವಿಧ ರೀತಿಯ ಶಸ್ತ್ರ ಚಿಕಿತ್ಸಾ ಸೌಲಭ್ಯಗಳು (ರೆಫರಲ್ ಆಸ್ಪತ್ರೆಗಳಲ್ಲಿ ಮಾತ್ರ)
- ಸ್ತ್ರೀರೋಗದ ಸರಳ ಶಸ್ತ್ರ ಚಿಕಿತ್ಸೆಗಳು (ರೆಫರಲ್ ಆಸ್ಪತ್ರೆಗಳಲ್ಲಿ ಮಾತ್ರ)
- ಮುಂದುವರಿದ ಎಂಡೋಸ್ಕೋಪಿಕ್ ಶಸ್ತ್ರ ಚಿಕಿತ್ಸೆ (ರೆಫರಲ್ ಆಸ್ಪತ್ರೆಗಳಲ್ಲಿ ಮಾತ್ರ)
- ರೆಫರಲ್ ಆಸ್ಪತ್ರೆಗಳಲ್ಲಿ ಸೋನೋಗ್ರಾಫ್ ಮತ್ತು ಕಾಲ್ಪೋಸ್ಕೋಪಿ

- ಎಲ್ಲಾ ರೆಫರಲ್ ಮತ್ತು ಹೆರಿಗೆ ಆಸ್ಪತ್ರೆಗಳಲ್ಲಿ ಹುಟ್ಟಿದ ಮಗುವಿಗೆ ಉಚಿತವಾಗಿ ಜನನ ಪ್ರಮಾಣ ಪತ್ರವನ್ನು ನೀಡಲಾಗುವುದು.
- ಒಳ ರೋಗಿಗಳಿಗೆ ಉಚಿತ ಹಾಲು, ಒಂದು ಪೌಂಡ್ ಬ್ರೆಡ್ ಹಾಗೂ ಬಾಳೆಹಣ್ಣು ವಿತರಣೆ ಮಾಡಲಾಗುವುದು.
- ಅರ್ಹ ಫಲಾನುಭವಿಗಳಿಗೆ ಉಚಿತವಾಗಿ ಮಡಿಲು ಕಿಟ್ ಹಾಗೂ ಜನನಿ ಸುರಕ್ಷಾ ಯೋಜನೆ ಅಡಿಯಲ್ಲಿ ಚೆಕ್ ವಿತರಿಸಲಾಗುವುದು.
- ಪಾಲಿಕೆಯ ಆಸ್ಪತ್ರೆಗಳಲ್ಲಿ ಮಡಿಲುಕಿಟ್ ಯೋಜನೆಯು ಫಲಾನುಭವಿಗಳು ಪಡೆಯುತ್ತಾರೆ.
- ಶಾಲಾ ಆರೋಗ್ಯ ತಪಾಸಣಾ ಕಾರ್ಯಕ್ರಮವು ಪಾಲಿಕೆಯ ಒಂದು ಭಾಗವಾಗಿರುತ್ತದೆ.
- ಪಾಲಿಕೆಯ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗುತ್ತದೆ.
- ನಾಯಿ ಕಡತಕ್ಕೆ ಸಂಬಂಧಿಸಿದಂತೆ ಚುಚ್ಚುಮದ್ದನ್ನು ಪಾಲಿಕೆಯ ಎಲ್ಲಾ ಆಸ್ಪತ್ರೆಗಳಲ್ಲಿ ನೀಡಲಾಗುವುದು.

## ॥ ಔಷಧಿ, ಲಸಿಕೆ ಹಾಗೂ ಇನ್ನಿತರೆ ವಸ್ತುಗಳ ಖರೀಧಿ ಮತ್ತು ವಿಲೇವಾರಿ ॥

- ಆರೋಗ್ಯ ಇಲಾಖೆಗೆ ಸಂಬಂಧಿಸಿದ ಲಸಿಕೆಗಳನ್ನು ದಾಸಪ್ಪ ಆಸ್ಪತ್ರೆ ಆವರಣದಲ್ಲಿರುವ ಕೇಂದ್ರ ಉಗ್ರಾಣದಲ್ಲಿ ದಾಸ್ತಾನು ಇರಿಸಿ ಸಂಬಂಧಿಸಿದ ಆಸ್ಪತ್ರೆಗಳಿಗೆ ಬೇಡಿಕೆಗೆ ಅನುಗುಣವಾಗಿ ವಿತರಿಸಲಾಗುವುದು.

- ಪಾಲಿಕೆಯಿಂದ ಖರೀದಿಸಲ್ಪಡುವ ಲಸಿಕೆಗಳನ್ನು ಪಾರದರ್ಶಕ ನಿಯಮಾವಳಿ ರೀತ್ಯಾ ಸಮಿತಿಯನ್ನು ರಚಿಸಿ ಸಮಿತಿಯ ಮುಖಾಂತರ ಮಾನ್ಯ ಆಯುಕ್ತರು ಮತ್ತು ಆರೋಗ್ಯ ಸ್ಥಾಯಿ ಸಮಿತಿ ಮತ್ತು ಪಾಲಿಕೆಯ ಸಭೆಯ ತೀರ್ಮಾನದಂತೆ ಅನುಮೋದನೆಯಂತೆ ಖರೀಧಿಸಲಾಗುವುದು.

- ಪಾಲಿಕೆಯ ಆಸ್ಪತ್ರೆಗಳಿಗೆ ಅವಶ್ಯವಿರುವ ಔಷಧಿ, ರೀ-ಏಜೆಂಟ್ಸ್ ಮತ್ತು ಸಲಕರಣೆಗಳನ್ನು ಸಮಿತಿ ಮುಖಾಂತರ e-procurement ಪಾರದರ್ಶಕ ನಿಯಮಾವಳಿ ರೀತಿಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಅಧ್ಯಕ್ಷರು, ಆರೋಗ್ಯ ಸ್ಥಾಯಿ ಸಮಿತಿ, ಹಾಗೂ ಪಾಲಿಕೆಯ ಸಭೆಯ ತೀರ್ಮಾನದಂತೆ ಖರೀಧಿಸಿ ದಾಸಪ್ಪ ಹೆರಿಗೆ ಆಸ್ಪತ್ರೆ ಆವರಣದಲ್ಲಿರುವ ಕೇಂದ್ರ ಉಗ್ರಾಣದಲ್ಲಿ ದಾಸ್ತಾನು ಮಾಡಿ ಅವಶ್ಯವಿರುವ ಆಸ್ಪತ್ರೆಗಳಿಗೆ ಬೇಡಿಕೆಗೆ ಅನುಗುಣವಾಗಿ ನೀಡಲಾಗುವುದು.

## ಮುಖ್ಯ ರಾಸಾಯನಿಕ ತಜ್ಞರವರು ಆಹಾರ ಪರೀಕ್ಷೆಗಳು ಸ್ವೀಕೃತವಾದ ಆಹಾರ ಮಾದರಿಗಳನ್ನು ವಿಶ್ಲೇಷಿಸಿ ವರದಿ ನೀಡುವ ಬಗ್ಗೆ.

- ಆಹಾರ ಸುರಕ್ಷತಾ ಅಧಿಕಾರಿಗಳು ತಮ್ಮ ವಲಯಗಳಿಂದ ಅವರ ವ್ಯಾಪ್ತಿಗೆ ಸಂಬಂಧಿಸಿದಂತೆ ಅನುಮಾನಸ್ಪದವಾಗಿ ಕಂಡುಬಂದರೆ ಅಂತಹ ಆಹಾರ ಮಾದರಿಗಳನ್ನು ತೆಗೆದು ಆಹಾರ ಪ್ರಯೋಗಕ್ಕೆ ಆಹಾರ ಸುಕ್ಷರತಾ ಅಧಿನಿಯಮದಡಿಯಲ್ಲಿ ಸಲ್ಲಿಸುವುದು.

- ಸಾರ್ವಜನಿಕರಿಂದ ದೂರು ಬಂದಾಗ ಆಹಾರ ಸುರಕ್ಷತಾ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಆಹಾರ ಮಾದರಿಗಳನ್ನು ತೆಗೆದು ಸರ್ವೇ ಸಂಪಲ್ ಆಗಿ ಆಹಾರ ಪ್ರಯೋಗಾಲಯಕ್ಕೆ ಸಲ್ಲಿಸುವುದು.

- ನಂತರ ಆಹಾರ ಪ್ರಯೋಗಾಲಯಕ್ಕೆ ಬಂದ ಮಾದರಿಗಳನ್ನು ಸ್ವೀಕರಿಸಿ ಪರೀಕ್ಷೆಗೊಳಪಡಿಸುವುದು. ಹಾಗೂ ಆಹಾರ ಸುಕ್ಷರತಾ ಅಧಿನಿಯಮದಡಿಯಲ್ಲಿ ವಿಶ್ಲೇಷಣೆ ಮಾಡಿ ವರದಿಯನ್ನು ಸಂಬಂಧಪಟ್ಟ ಅಂಕಿತ ಅಧಿಕಾರಿಗಳಿಗೆ ಕಳುಹಿಸಲಾಗುವುದು.

- ಸಾರ್ವಜನಿಕರು ಸ್ವತಃ ತಂದ ಆಹಾರ ಮಾದರಿಗಳನ್ನು ಸಹ ಆಹಾರ ಪ್ರಯೋಗಾಲಯದಲ್ಲಿ ವಿಶ್ಲೇಷಣೆ ಮಾಡಿ ವರದಿ ನೀಡಲಾಗುವುದು.

## ನಾನ್-ಕ್ಲಿನಿಕಲ್‌ಗೆ ಸಂಬಂಧಿಸಿರುವ ಬಗ್ಗೆ.

### ಜನನ ಮತ್ತು ಮರಣ ಪ್ರಮಾಣ ಪತ್ರ ವಿತರಣೆಯ ಬಗ್ಗೆ.

- ಪಾಲಿಕೆಯ ಎಲ್ಲಾ ವಿಧಾನ ಸಭಾ ಕ್ಷೇತ್ರದವರು ಆರೋಗ್ಯ ವೈದ್ಯಾಧಿಕಾರಿ ರವರ ಕಛೇರಿಯಲ್ಲಿ ಜನನ-ಮರಣ ಪ್ರಮಾಣ ಪತ್ರಗಳನ್ನು ನಿಗಧಿತ ಶುಲ್ಕವನ್ನು ಪಾವತಿಸಿಕೊಂಡು ನಿಗಧಿ ಪಡಿಸಿರುವ (ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ 2011 ರ ಅಡಿಯಲ್ಲಿ ಸಕಾಲ) ದಿನಾಂಕದಂದು ನೀಡಲಾಗುವುದು. ತಡವಾಗಿ ನೋಂದಣಿ ಮತ್ತು ಹೆಸರು ಸೇರ್ಪಡೆ ಮತ್ತು ತಿದ್ದುಪಡಿ

- ತಡವಾಗಿ ನೊಂದಣಿ ಮತ್ತು ಹೆಸರು ಸೇರ್ಪಡೆ ಮತ್ತು ತಿದ್ದುಪಡಿಯನ್ನು ಜಂಟಿ ನಿರ್ಧೇಶಕರು ಸಾಂಖಿಕರವರ ಅನುಮೋದನೆಯಂತೆ ಸಂಬಂಧಪಟ್ಟವರಿಗೆ ಜನನ ಮತ್ತು ಮರಣ ಪ್ರಮಾಣ ಪತ್ರವನ್ನು ನೀಡಲಾಗುವುದು.

<u>ವ್ಯಾಪಾರ ಪರವಾನಗಿ ನವೀಕರಣ ಮತ್ತು ನಿರಕ್ಷೇಪಣಾ ಪತ್ರ ನೀಡುವ ಬಗ್ಗೆ.</u>

- ಹೊಸ ವ್ಯಾಪಾರ ಪರವಾನಗೆ ಪಡೆಯಲು ಅರ್ಜಿ ನಮೂನೆ ಮತ್ತು ಶುಲ್ಕ ಪಾವತಿಸಿದ್ದಲ್ಲಿ ನೀಡಲಾಗುವುದು, ಅದಕ್ಕೆ ಸಂಬಂಧಿಸಿದ ದಾಖಲೆಗಳು ಈ ಕೆಳಕಂಡಿರುತ್ತದೆ.
- ಮಾಲೀಕರ ಒಪ್ಪಿಗೆ ಪತ್ರ
- ನೆರೆಹೊರೆಯವರ ಒಪ್ಪಿಗೆ ಪತ್ರ
- ತೆರಿಗೆ ಪಾವತಿಸಿದ ರಶೀಧಿ
- ಖಾತಾ ನಗದು ಹಾಗೂ ನೀಲಿನಕ್ಷೆಗಳನ್ನು ನೀಡಿದ್ದಲ್ಲಿ ಸಂಬಂಧಪಟ್ಟ ಹಿರಿಯ ಆರೋಗ್ಯ ಪರಿವೀಕ್ಷಕರು ಸ್ಥಳ ಪರಿಶೀಲಿಸಿ ವರದಿಯನ್ನು ಆರೋಗ್ಯ ವೈದ್ಯಾಧಿಕಾರಿಗಳಿಗೆ ನೀಡಲಾಗುವುದು.
- ಹಾಗೂ ಉಪ ಆರೋಗ್ಯಾಧಿಕಾರಿ ಮತ್ತು ಆರೋಗ್ಯ ಅಧಿಕಾರಿಗಳು ತಪಾಸಣೆ ವರದಿಯಂತೆ ವಲಯ ಅಪರ-ಜಂಟಿ ಆಯುಕ್ತರ ರವರ ಅನುಮೋದನೆಯಂತೆ ವ್ಯಾಪಾರ ಪರವಾನಗಿಯನ್ನು ನೀಡಲಾಗುವುದು.
- ಪರವಾನಗಿ ನವೀಕರಣಕ್ಕೆ ಸಂಬಂಧಿಸಿದಂತೆ ಅರ್ಜಿದಾರರು ಸಂಬಂಧಿಸಿದ ನಮೂನೆ ಮತ್ತು ಶುಲ್ಕವನ್ನು ಆರೋಗ್ಯ ವೈದ್ಯಾಧಿಕಾರಿ ರವರ ಕಛೇರಿಯಲ್ಲಿ ಪಾಲಿಕೆ ನಿಗಧಿ ಪಡಿಸಿರುವ ಏಕದಾವಾಕ್ಷಿ (single window) ನಲ್ಲಿ ಎಲ್ಲಾ ದಾಖಲೆಗಳನ್ನು ಪರಿಪೂರ್ಣವಿದ್ದಲ್ಲಿ ಕರ್ನಾಟಕ ನಾಗರೀಕ ಸೇವೆಗಳ ಖಾತರಿಯಲ್ಲಿ ಅಧಿನಿಯಮ 2011 ರಡಿಯಲ್ಲಿ (ಸಕಾಲ) 30 ದಿನದೊಳಗಾಗಿ ನೀಡಲಾಗುವುದು.
- ಆಯಾ ವಲಯ ವ್ಯಾಪ್ತಿಯ ಉಪ ಆರೋಗ್ಯಾಧಿಕಾರಿ ಹಾಗೂ ಆರೋಗ್ಯಾಧಿಕಾರಿ ವ್ಯಾಪ್ತಿಗೆ ಸಂಬಂಧಿಸಿದ ಸಾರ್ವಜನಿಕರ ದೂರು ಹಾಗೂ ಇನ್ನಿತರೆ ಆರೋಗ್ಯಕ್ಕೆ ಸಂಬಂಧಿಸಿದ ಅಹಲ್‌ವಾರುಗಳನ್ನು ಸ್ವೀಕರಿಸಿ ಆಯಾ ವಲಯ ವ್ಯಾಪ್ತಿಗೊಳಪಡುವ ಉಪ ಆರೋಗ್ಯಾಧಿಕಾರಿಗಳಿಗೆ ರವಾನಿಸಲಾಗುವುದು.
- ಪಾಲಿಕೆಯ ಸದಸ್ಯರ ನಿಧಿಯಿಂದ ನೀಡಲಾಗುವ ವೈದ್ಯಕೀಯ ವೆಚ್ಚ ಮರುಪಾವತಿಸುವ ಬಗ್ಗೆ.
- ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ ವೈದ್ಯಕೀಯ ವೆಚ್ಚಕ್ಕೆ ಸಂಬಂಧಿಸಿದಂತೆ ಪೂಜ್ಯ ಮಹಾಪೌರರ ನಿಧಿಯಿಂದ ಕಡುಬಡವರಿಗೆ ನೀಡಲಾಗುವ ವೈದ್ಯಕೀಯ ಸೇವೆಯನ್ನು ಹಿರಿಯ ಪರಿವೀಕ್ಷಕರು ಸ್ಥಳ ಪರಿಶೀಲಿಸಿ ಮಹಜರ್ ಮಾಡಿ ವರದಿಯನ್ನು ಉಪ ಆರೋಗ್ಯಾಧಿಕಾರಿಗಳ ಮುಖಾಂತರ ಆರೋಗ್ಯಾಧಿಕಾರಿಗಳಿಗೆ ರವಾನಿಸಿ ಮುಖ್ಯ ಆರೋಗ್ಯಾಧಿಕಾರಿಗಳಿಂದ ದೃಢೀಕರಿಸಿ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಸಲ್ಲಿಸಲಾಗುವುದು.

**ಸೊಳ್ಳೆ ನಿಯಂತ್ರಣ ಮತ್ತು ಸೊಳ್ಳೆಯಿಂದ ಹರಡುವ ಕಾಯಿಲೆಯನ್ನು ತಡೆಗಟ್ಟುವ ಬಗ್ಗೆ.**

- ಪ್ರತಿ ವಾರ್ಡ್‌ಗಳಲ್ಲಿ 3 ಜನ ಸೊಳ್ಳೆ ನಾಶಕರನ್ನು ಸಿಂಪಡಿಸುವ ಕಾರ್ಯವನ್ನು ನಿಯೋಜಿಸಲಾಗಿರುತ್ತದೆ.
- ಇವರು ಸೊಳ್ಳೆ ಔಷಧಿಗಳನ್ನು ಸಿಂಪಡಿಸುವುದೊಂದಿಗೆ ಮನೆ ಮನೆಗೆ ತೆರಳಿ ಕಾಯಿಲೆಗಳ ಬಗ್ಗೆ ತಿಳುವಳಿಕೆ ನೀಡುತ್ತಾರೆ.
- ದೊಡ್ಡ ಮೋರಿಗಳಲ್ಲಿ ಸೊಳ್ಳೆ ಉತ್ಪತ್ತಿಯಾಗುವ ಕಣಗಳು ಕಂಡಬಂದಲ್ಲಿ ಪವರ್‌ಸ್ಪ್ರೇಗಳನ್ನು ವಾಹನಗಳ ಮುಖಾಂತರ ಔಷಧಿಗಳನ್ನು ಸಿಂಪಡಿಸಿ ಸೊಳ್ಳೆ ತಾಣಗಳಲ್ಲಿ ಕ್ರಮ ಕೈಗೊಳ್ಳಲಾಗುತ್ತಿದ್ದು, ಈ ಎಲ್ಲಾ ಕೆಲಸ ಮೇಲ್‌ಉಸ್ತುವಾರಿ ವಲಯ ಉಪ ಆರೋಗ್ಯಾಧಿಕಾರಿ ಹಾಗೂ ಆರೋಗ್ಯಾಧಿಕಾರಿಗಳು ಕಾರ್ಯನಿರ್ವಹಿಸಿರುತ್ತಾರೆ.

ಮುಖ್ಯ ಆರೋಗ್ಯಾಧಿಕಾರಿ
28/11/12
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
28/11/201